ಇದು ಸಾಮಾನ್ಯವಾಗಿ ಎಲ್ಲಾ ಮಹಿಳೆಯರಲ್ಲಿ ಇರುವ ಕುತೂಹಲ. ಮೊದಲೆಲ್ಲ ಒಡವೆ ಅಂದಕೂಡಲೇ ಚಿನ್ನದ ಒಡವೆಗಳೇ ಕಣ್ಮುಂದೆ ಬರುತ್ತಿದ್ದವು. ಆದರೀಗ ಆಭರಣ ಚಿನ್ನದ್ದೇ ಆಗಬೇಕಿಲ್ಲ; ಬೆಳ್ಳಿಯೂ ಆಗಬಹುದು. ಚಿನ್ನದ ಬೆಲೆ ಗಗನಕ್ಕೇರಿದರೂ ಮಹಿಳೆಯರಲ್ಲಿ ಚಿನ್ನದ ವ್ಯಾಮೋಹ ಕಡಿಮೆಯಾಗಿಲ್ಲ. ಆದರೆ ಇದೀಗ ಚಿನ್ನದ ಆಭರಣಗಳಿಗೆ ಪರ್ಯಾಯವಾಗಿ ಬೆಳ್ಳಿ ಒಡವೆಗಳು ಟ್ರೆಂಡಿಯಾಗುತ್ತಿವೆ.

ಸುಮಾರು ಎರಡು ದಶಕಗಳ ಹಿಂದೆ ಬೆಳ್ಳಿಯ ಆಭರಣ ಧರಿಸುವುದು ಕಡಿಮೆ ಆದಾಯದವರಾಗಿದ್ದರು. ಚಿನ್ನ ಖರೀದಿಸಲಾಗದವರು ಬೆಳ್ಳಿ ಆಭರಣ ತೊಟ್ಟು ತೃಪ್ತಿಪಟ್ಟುಕೊಳ್ಳುತ್ತಿದ್ದರು. ಆದರೆ, ಮಾಡೆಲ್‌ಗಳು ಹಾಗೂ ಚಿತ್ರನಟಿಯರು ರ‍್ಯಾಂಪ್ ಮೇಲೆ ಬೆಳ್ಳಿ ಆಭರಣಗಳನ್ನು ತೊಟ್ಟು ಫ್ಯಾಷನ್ ಟ್ರೆಂಡ್‌ಗೆ ಯಾವಾಗ ನಾಂದಿ ಹಾಡಿದರೋ, ಅಂದಿನಿಂದ ಬೆಳ್ಳಿ ಆಭರಣಗಳಿಗೆ ಎಲ್ಲಿಲ್ಲದ ಮಾನ್ಯತೆ ಬಂದಿದೆ.

ಇದೀಗ ಯುವತಿಯರು ಹೆಚ್ಚಾಗಿ ಬೆಳ್ಳಿ ಆಭರಣಗಳನ್ನು ಇಷ್ಟಪಡುತ್ತಿದ್ದಾರೆ. ಅದರಲ್ಲೂ ಮುಖ್ಯವಾಗಿ ಅಫ್ಘಾನಿ ಶೈಲಿಯ ಕಿವಿಯೋಲೆಗಳು, ಜುಮುಕಿಗಳು, ಬ್ರೇಸ್ಲೆಟ್‌ನಂತೆ ಕಾಣುವ ದೊಡ್ಡ ಗಾತ್ರದ ಬಳೆಗಳು, ಉಂಗುರ ಹಾಗೂ ಬೆಳ್ಳಿ ನಾಣ್ಯದ ದೊಡ್ಡ ದೊಡ್ಡ ಪೆಂಡೆಂಟ್‌ಗಳಿಗೆ ಮಾರು ಹೋಗಿದ್ದಾರೆ. ಬೆಳ್ಳಿ ಆಭರಣಗಳ ಒಂದು ವಿಶೇಷವೆಂದರೆ ಇವುಗಳು ಸಾಂಪ್ರದಾಯಿಕ ಬಟ್ಟೆಗೂ ಸೈ ಮಾಡರ್ನ್ ಬಟ್ಟೆಗೂ ಸೈ ಎಂಬಂತೆ ಎಲ್ಲಾ ಬಟ್ಟೆಗಳಿಗೆ ಮ್ಯಾಚ್ ಮಾಡಿ ಧರಿಸಬಹುದು.

## ಬೆಳ್ಳಿ ಒಡವೆ- ಟಿಪ್ಸ್

- ಸಮಾರಂಭದಲ್ಲಿ ಧರಿಸಿದ ಒಡವೆಗಳಲ್ಲಿ ಬೆವರು ಅಥವಾ ನೀರಿನ ಅಂಶವಿದ್ದರೆ ಅದನ್ನು ಪೆಟ್ಟಿಗೆಯಲ್ಲಿ ಎತ್ತಿಡುವ ಮುನ್ನ, ಒಣಗಿದ ಬಟ್ಟೆ ಅಥವಾ ಟಿಶ್ಯೂ ಪೇಪರ್‌ನಲ್ಲಿ ಒರೆಸಿ ಇಡಿ.
- ಬೆಳ್ಳಿಯ ಆಭರಣಗಳು ಕೊಳೆಯಾಗಿದ್ದರೆ, ಉಗುರು ಬೆಚ್ಚಗಿನ ನೀರಿಗೆ ಚಿಟಿಕೆ ಉಪ್ಪು ಸೇರಿಸಿ ಅದರಲ್ಲಿ ತೊಳೆಯಿರಿ.
- ಆಭರಣ ತೊಳೆಯುವಾಗ ಟೂತ್ ಪೇಸ್ಟ್ ಅನ್ನು ನೀರಿನಲ್ಲಿ ಬೆರೆಸಿ, ಆ ಮಿಶ್ರಣದಿಂದ ಒಡವೆಗಳನ್ನು ತೊಳೆದರೆ ಆಭರಣಕ್ಕೆ ಹೊಳಪು ಬರುತ್ತದೆ.
- ಬೆಳ್ಳಿ ಆಭರಣದಲ್ಲಿ ಹರಳುಗಳಿದ್ದರೆ ಉಪ್ಪು ನೀರು ಬಳಸಬೇಡಿ.

### ನಾನಾ ವಿನ್ಯಾಸ

ಬೆಳ್ಳಿ ಆಭರಣಗಳಲ್ಲಿಯೂ ಬಗೆ ಬಗೆಯ ವಿನ್ಯಾಸಗಳು ಇದೀಗ ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ಅವುಗಳಲ್ಲಿ ಮುಖ್ಯವಾಗಿ ಕಲರ್‌ಫುಲ್ ದಾರಗಳಲ್ಲಿ ತಯಾರಿಸಲಾದ ಟ್ಯಾಸೆಲ್‌ಗಳು, ವಿವಿಧ ವಿನ್ಯಾಸದ ಬೀಡ್ಸ್‌ಗಳು, ಗೆಜ್ಜೆ, ಮಿರರ್‌ಗಳನ್ನು ಬಳಸಿ ತಯಾರಿಸಲಾದ ಒಂದಕ್ಕಿಂತ ಒಂದು ಭಿನ್ನ ಹಾಗೂ ಸುಂದರವಾಗಿ ಕಾಣುವಂಥ ಬೆಳ್ಳಿಯ ಆಭರಣಗಳು ಮಾರುಕಟ್ಟೆಗೆ ಬಂದಿವೆ. ಕಿವಿಯೋಲೆ, ಮೂಗುತಿ, ಹಾರ, ಡಾಬು, ವಂಕಿ, ಸೊಂಟ ಪಟ್ಟಿ, ಕಾಲುಂಗುರ, ಬಳೆ, ಉಂಗುರ ಸೇರಿದಂತೆ ಎಲ್ಲ ಥರದ ಬೆಳ್ಳಿ ಆಭರಣಗಳು ಇದೀಗ ಟ್ರೆಂಡಿಯಾಗಿದ್ದು ಎಲ್ಲರನ್ನೂ ಸೂಜಿಗಲ್ಲಿನಂತೆ ಸೆಳೆಯುತ್ತಿವೆ. ಶುಭ ಸಮಾರಂಭಗಳಿಗೆ ಧರಿಸಲು ಬರೀ ಬಂಗಾರದ ಆಭರಣ ಬೇಕೆಂದಿಲ್ಲ, ಬೆಳ್ಳಿ ಒಡವೆಗಳೂ ಚೆನ್ನಾಗಿ ಕಾಣುತ್ತದೆ.

ಸಾಂಪ್ರದಾಯಿಕ ಒಡವೆಗಳಾದ ಸೀರೆ, ಸಲ್ವಾರ್‌ಗಳ ಮೇಲೆ ದೊಡ್ಡದಾದ ಪೆಂಡೆಂಟ್‌ವುಳ್ಳ ಬೆಳ್ಳಿಯ ಶಾರ್ಟ್ ಅಥವಾ ಲಾಂಗ್ ನೆಕ್ಲೇಸ್‌ಗಳ ಜೊತೆಗೆ ದೊಡ್ಡದಾದ ಬೆಳ್ಳಿಯ ಜುಮುಕಿ, ಕೈಯಲ್ಲಿ ಬೆಳ್ಳಿಯ ಸಾಲು ಸಾಲು ಬಳೆಗಳು ಇದೀಗ ಸಖತ್ತಾಗಿ ಕಾಣುತ್ತದೆ. ಇವುಗಳನ್ನು ಬರೀ ಕಾಟನ್ ಸೀರೆಗಳ ಮೇಲೆ ಮಾತ್ರವಲ್ಲ ರೇಷ್ಮೆ ಸೀರೆಗಳ ಮೇಲೂ ಧರಿಸಿ ಎಲ್ಲಾ ಶುಭ ಸಮಾರಂಭಗಳಿಗೆ ಹೋಗಬಹುದು. ಹಾಗೇ ಸಲ್ವಾರ್‌ಗಳ ಮೇಲೆ ವಿವಿಧ ಬಣ್ಣಗಳ ಥ್ರೆಡ್‌ನಲ್ಲಿ ಪೋಣಿಸಿದ ಸಿಲ್ವರ್ ಡಾಲರ್‌ನ ನೆಕ್ಲೇಸ್ ಕೂಡ ಇದೀಗ ಟ್ರೆಂಡಿಂಗ್‌ನಲ್ಲಿದೆ.

ಇವಿಷ್ಟೇ ಅಲ್ಲದೆ ಬೆಳ್ಳಿಯ ಜುಮುಕಿ ಅಳವಡಿಸಿದ ಬಳೆಗಳು ಇದೀಗ ಎಲ್ಲರ ಗಮನ ಸೆಳೆಯುತ್ತಿವೆ. ಇನ್ನು ಮಾಡರ್ನ್ ಡ್ರೆಸ್‌ಗಳಾದ ಮಿಡಿ, ಜೀನ್ಸ್, ಫ್ರಾಕ್, ಗೌನ್‌ಗಳ ಮೇಲೆ ಧರಿಸಲು ಲೈಟ್ ವೇಟ್‌ನ ಸಿಲ್ವರ್ ಚೇನ್‌ಗಳು, ಬ್ರೇಸ್ಲೆಟ್‌ಗಳು ಮಾರುಕಟ್ಟೆಗೆ ಎಂಟ್ರಿ ಕೊಟ್ಟಿವೆ. ಇವೆಲ್ಲವುಗಳನ್ನು ಪಾರ್ಟಿ ಹಾಗೂ ಸಮಾರಂಭಗಳಿಗೆ ಅನುಗುಣವಾಗಿ ನೀವು ಧರಿಸುವ ಉಡುಪಿಗೆ ಮ್ಯಾಚ್ ಮಾಡಿಕೊಂಡು ಹೋಗಬಹುದು. ನೀವು ಧರಿಸುವ ಉಡುಪು ಗ್ರ್ಯಾಂಡ್ ಲುಕ್‌ನದ್ದಾಗಿದ್ದರೆ ಅದಕ್ಕೆ ಮ್ಯಾಚ್ ಆಗುವ ಸಿಲ್ವರ್ ಆಭರಣಗಳ ಮೇಲೆ ಹರಳುಗಳನ್ನು ಅಳವಡಿಸಿದ ಆಭರಣ ತೊಡಬಹುದು. ಇಲ್ಲವೇ ಸಿಂಪಲ್ ಡ್ರೆಸ್‌ಗೆ ಗ್ರ್ಯಾಂಡ್ ಲುಕ್ ನೀಡಲು ಬಯಸುವವರು ಗ್ರ್ಯಾಂಡಾಗಿರುವ ಸಿಲ್ವರ್ ಆಭರಣ ಧರಿಸಬಹುದು.

